'ನಿರ್ಭಯ' ಘಟನೆ ನಡೆದಾಗ ಇಂತಹ ಫ್ಲಾಷ್ ಮಾಬ್ ಡ್ಯಾನ್ಸ್‌ನಲ್ಲಿ, ಮಿಡ್‌ನೈಟ್ ರ‍್ಯಾಲಿಯಲ್ಲಿ, ಟ್ಯಾಂಕ್‌ಬಂಡ್ ಮೇಲೆ ತಾನೂ ತನ್ನ ಗೆಳತಿಯರೂ ಸೇರಿ ಪಾಲ್ಗೊಂಡಿದ್ದೆವು. ಅವರೊಂದಿಗೆ ಘೋಷಣೆಗಳನ್ನು ಕೂಗಿದ್ದಳು. ಕ್ಯಾಂಡಿಲ್ ಲೈಟ್ಸ್ ಹಚ್ಚಿದ್ದಳು. ಎಲ್ಲಿ ಯಾರೇ ಈ ಕಾರ್ಯಕ್ರಮವನ್ನು ಮಾಡಿದಾಗಲೂ ನಾನೂ ನನ್ನ ಗೆಳತಿಯರು ತುಂಬಾ ಉತ್ಸಾಹದಿಂದ ಭಾಗವಹಿಸಿದ್ದುಂಟು. ಹಿಂದೊಮ್ಮೆ ಮತ್ತೊಬ್ಬರಿಗೆ ನ್ಯಾಯ ಸಿಗಬೇಕೆಂಬ, ಮಹಿಳೆಯರ ಮೇಲೆ ಅತ್ಯಾಚಾರಗಳು ನಡೆಯಕೂಡದೆಂಬ ಗುಂಪಿನಲ್ಲಿದ್ದ ನಾನು, ಇಂತಹ ಹಿಂಸೆ ಇನ್ನು ಮುಂದೆಂದೂ ನಡೆಯಕೂಡದೆಂದು ಘಂಟಾಘೋಷವಾಗಿ ಸಾರಿ 'ನಿರ್ಭಯ' ಹೋರಾಟದಲ್ಲಿ ಪಾಲ್ಗೊಂಡ ನಾನು, ಇಂದು ಇಂತಹ ಹೇಯ ಕೃತ್ಯಕ್ಕೆ ಬಲಿಯಾಗಿ ಈಗ ಒಬ್ಬ ಪ್ರೇಕ್ಷಕಳಂತೆ ನಿಂತು ತನಗೆ ನ್ಯಾಯ ಸಿಗಬೇಕೆಂದು ಹೋರಾಡುತ್ತಿರುವ ಗುಂಪನ್ನು ನೋಡುತ್ತಿದ್ದಾಳೆ ಅನಾಮಿಕಳಾಗಿ.

ಸ್ವಲ್ಪ ದೂರ ಹೆಜ್ಜೆ ಹಾಕುತ್ತಿದ್ದಂತೆ ಆ ಟ್ರಾಫಿಕ್ ಪೊಲ್ಯೂಷನ್‌ಗೆ ಎಲರ್ಜಿಟಿಕ್ ಕೆಮ್ಮು ಮೊದಲಾಯಿತು. ಎಲ್ಲಾದರೂ ಸ್ವಲ್ಪ ಹೊತ್ತು ಕೂಡಬೇಕು. ಯಾವ ಯೋಚನೆಯನ್ನೂ ಮಾಡದೇ ರಸ್ತೆ ಬದಿಯಲ್ಲಿರುವ ಕಾಫಿಶಾಪ್ ಹೊಕ್ಕೆ.

ಕೂತು ಒಂದಿಷ್ಟು ವಿಶ್ರಾಂತಿ ಪಡೆಯುತ್ತಿದ್ದಂತೆ ಸುತ್ತಲೂ ಗದ್ದಲ ಕೇಳಿಸಿತು. ನನ್ನ ವಯಸ್ಸಿನವರೇ ಬಹಳಷ್ಟು ಮಂದಿ ದೀಪಾವಳಿ ಸಾಯಂಕಾಲದ ಮತಾಪುಗಳಂತೆ ಬೆಳಗುತ್ತಿರುವ ಮುಖಗಳೊಂದಿಗೆ ಜೋಡಿ ಜೋಡಿಯಾಗಿ, ಗುಂಪಾಗಿ ಹರಟೆ ಹೊಡೆಯುತ್ತಿದ್ದಾರೆ. ಕ್ಲಿಕ್ಕಿಸಿದ ಫೋಟೋಗಳನ್ನು ಸ್ಮಾರ್ಟ್ ಫೋನ್‌ನಲ್ಲಿ ಆಗಿಂದಾಗಲೇ ಫೇಸ್‌ಬುಕ್‌ನಲ್ಲಿ ಸ್ಟೇಟಸ್ ಅಪ್‌ಡೇಟ್ ಮಾಡುತ್ತಿದ್ದಾರೆ. ನಾನೇನೋ ಫೇಸ್‌ಬುಕ್ ಅಕೌಂಟನ್ನು ಡಿಯಾಕ್ಟಿವೇಟ್ ಮಾಡಿಬಿಟ್ಟಿದ್ದೇನೆ.

ಈಗ ನನ್ನ ಪ್ರೊಫೈಲ್‌ಪಿಕನ್ನು ಈ ಮಾಸ್ಕ್‌ನಿಂದ ನನ್ನ ಹೆಸರಿನಲ್ಲಲ್ಲದೆ ಬೇರೆ ಹೆಸರಿನಿಂದ ಓಪನ್ ಮಾಡಿದರೆ? ಏನಾ ಹೆಸರು 'ಅಜೇಯ'. ಏನ್ಮಾಡುತ್ತಿರುತ್ತಾಳೆ... ಸಾಮೂಹಿಕ ಅತ್ಯಾಚಾರ ಪ್ರಕರಣಕ್ಕೆ ಸಂಬಂಧಿಸಿದಂತೆ ನ್ಯಾಯಕ್ಕಾಗಿ ಹೋರಾಟ ಮಾಡುತ್ತಿರುತ್ತಾಳೆ. ದಿನವೂ ಏನಂತಾ ಸ್ಟೇಟಸ್ ಇಡೋದು. ತುಂಬಾ ಇಡಬಹುದು. ಟೀವಿ. ಡಿಬೇಟ್ಸ್, ಅನೇಕ ತರದ ಸೆಲಬ್ರಿಟಿಸ್ ಬೈಟ್ಸ್, ಕ್ಯಾಂಡಿಲ್ ಲೈಟ್, ರ‍್ಯಾಲಿಗಳು, ಫ್ಲಾಷ್‌ಮಾಬ್ ಡ್ಯಾನ್ಸ್... ತನ್ನ ಮೂಡ್ಸ್... ದಿನವೂ ಅಲ್ಲಿ ಇಲ್ಲಿ ನಡೆಯುತ್ತಿರುವ ಅತ್ಯಾಚಾರಗಳು... ದೊಡ್ಡ ಅಲೆಗಳಂತೆ ಮೇಲೆದ್ದು ಅಬ್ಬರಿಸುತ್ತಿರುವ ನಗೆಯ ಅಲೆಗಳಲ್ಲಿ ನನ್ನ ಆಲೋಚನೆಗಳು ಮುರಿದು ಬಿದ್ದವು.

ಇಂತಹ ಎಷ್ಟೋ ನಗೆಗಳು ನನ್ನ ಕಿವಿಗಳಿಗೆ ಅಪ್ಪಳಿಸುತ್ತಾ ಬಂದಿವೆ. ಅದೆಷ್ಟೋ ಸಂತೋಷದ ಉಲ್ಲಾಸದ ಕಚಗುಳಿ!! ನಿಜಕ್ಕೆ ನೆನಪೇ ಇಲ್ಲದ ವಾಸ್ತವ ಕ್ಷಣಗಳೇ ಪ್ರವಹಿಸುವ ನಿಜವಾದ ಕಾಲ. ಈಗ ಆ ಒಂದು ಘಟನೆ ನನ್ನ ಜೀವನವನ್ನು ಪದೇ ಪದೇ ನೆನಪಿನ ಚಂಡಮಾರುತಕ್ಕೆ ಸಿಲುಕಿದ ಒಂಟಿ ವೃಕ್ಷವನ್ನಾಗಿಸಿದೆ. ಭವಿಷ್ಯತ್ತು ಸುಗಮವಾಗಬೇಕಾದ ಈ ವಯಸ್ಸಿನಲ್ಲಿ ಜೀವನ ನೆನಪುಗಳ ಮರುಭೂಮಿಯಾಗಿದೆ. ಅವತ್ತಿನ ನಂತರ ಎಲ್ಲ ಬದಲಾಗಿ ಬಿಟ್ಟಿದೆ. ನನ್ನ ಉತ್ಸಾಹದ ಸಾಯಂಕಾಲಗಳನ್ನು ಕಿತ್ತುಕೊಂಡಿದ್ದಕ್ಕೆ ಅವರಿಗೆ ಯಾವ ಶಿಕ್ಷೆಯಾಗಬೇಕು.

ಆರ್ಡರ್ ತೆಗೆದುಕೊಳ್ಳಲು ಮಾಣಿ ಬಂದರೆ ಬೇಕೆನಿಸಿದವನ್ನು ಮೆನುನಲ್ಲಿಯೇ ಬೆರಳು ಮಾಡಿ ತೋರಿಸಿದೆ. ಮುಖಕ್ಕಿದ್ದ ಈ ಮಾಸ್ಕನ್ನು ತೆಗೆದರೆ ಯಾರಾದರೂ ಗುರುತಿಸಿದರೆ... 'ಏ... ಕಮಾನ್...' ಎಂದು ನನ್ನ ಹೆಸರು ಉಚ್ಚರಿಸಲು ಹೋಗಿ ಸುಮ್ಮನಾದೆ. 'ಉಶ್, ಉಶ್!...' ಯಾರಾದರೂ ಹೆಸರು ಕೇಳಿ ಬಿಟ್ಟರೆ... ರಹಸ್ಯ.

ವೈಬ್ರೇಷನ್‌ನಲ್ಲಿರುವ ಫೋನ್ ಕದಲುತ್ತಿದೆ. ಖಂಡಿತವಾಗಿ ಮನೆಯಿಂದಲೇ ಇರಬೇಕು. ಅಮ್ಮ